# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 342

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 14.02.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬಿ.ಎಂ.ಟಿ.ಸಿ/ ಕೆ.ಎಸ್.ಆರ್.ಟಿ.ಸಿ/ ಎನ್.ಡಬ್ಲ್ಯೂ.ಕೆ.ಎಸ್.ಆರ್.ಟಿ.ಸಿ/ ಕೆ.ಕೆ.ಆರ್.ಟಿ.ಸಿ ನಿಗಮಗಳಲ್ಲಿ ಒಟ್ಟಾರೆ ಇರುವ ಬಸ್ಸುಗಳ ಸಂಖ್ಯೆ ಎಷ್ಟು; ನಾಲ್ಕು ನಿಗಮಗಳಲ್ಲಿ ಯಾವ ಯಾವ ನಿಗಮಗಳು ಲಾಭದಾಯಕವಾಗಿವೆ; ಯಾವ ನಿಗಮಗಳು ನಷ್ಟದಲ್ಲಿವೆ; (ಮಾಹಿತಿ ಒದಗಿಸುವುದು) | ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿರುವ ಒಟ್ಟು ಬಸ್‌ಗಳ ಸಂಖ್ಯೆ ಕೆಳಕಂಡಂತಿದೆ: |

| ಸಂಸ್ಥೆ | ಬಸ್‌ಗಳ ಸಂಖ್ಯೆ |
|---|---|
| ಕ.ರಾ.ರ.ಸಾ.ನಿಗಮ | 8337 |
| ಬೆಂ.ಮ.ಸಾ.ಸಂಸ್ಥೆ | 6147 |
| ವಾ.ಕ.ರ.ಸಾ.ಸಂಸ್ಥೆ | 4895 |
| ಕ.ಕ.ರ.ಸಾ.ನಿಗಮ | 4845 |
| **ಒಟ್ಟು** | **24224** |

ಸದರಿ ನಾಲ್ಕು ಸಾರಿಗೆ ಸಂಸ್ಥೆಗಳು ನಷ್ಟದಲ್ಲಿರುತ್ತವೆ. ಕಳೆದ ಮೂರು ವರ್ಷಗಳಲ್ಲಿ ಅನುಭವಿಸಿದ ನಷ್ಟದ ಮಾಹಿತಿ ಕೆಳಕಂಡಂತಿದೆ:

| | **(ರೂ.ಕೋಟಿಗಳಲ್ಲಿ)** |
|---|---|
| **ವರ್ಷ** | **ನಷ್ಟ** |
| **ಕ.ರಾ.ರ.ಸಾ.ನಿಗಮ** | |
| 2020-21 | 581.15 |
| 2021-22 | 423.31 |
| 2022-23 (ಅಂದಾಜು) | 42.89 |

<table>
<tr>
<td></td>
<td></td>
<td>
<table>
<tr><th colspan="2">ಬೆಂ.ಮ.ಸಾ.ಸಂಸ್ಥೆ</th></tr>
<tr><td>2020-21</td><td>164.20</td></tr>
<tr><td>2021-22</td><td>178.25</td></tr>
<tr><td>2022-23<br>(ಅಂದಾಜು)</td><td>77.38</td></tr>
<tr><td colspan="2"></td></tr>
<tr><th colspan="2">ವಾ.ಕ.ರ.ಸಾ.ಸಂಸ್ಥೆ</th></tr>
<tr><td>2020-21</td><td>389.08</td></tr>
<tr><td>2021-22</td><td>462.58</td></tr>
<tr><td>2022-23<br>(ಅಂದಾಜು)</td><td>26.14</td></tr>
<tr><th colspan="2">ಕ.ಕ.ರ.ಸಾ.ನಿಗಮ</th></tr>
<tr><td>2020-21</td><td>186.45</td></tr>
<tr><td>2021-22</td><td>225.82</td></tr>
<tr><td>2022-23<br>(ಅಂದಾಜು)</td><td>114.99</td></tr>
</table>
2022-23ನೇ ಸಾಲಿನಲ್ಲಿ ಇಂಧನ ವೆಚ್ಚ ಹಾಗೂ ಭವಿಷ್ಯ ನಿಧಿ ಹಿಂಬಾಕಿ ಪಾವತಿಗಾಗಿ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಸರ್ಕಾರದಿಂದ ಈ ಕೆಳಕಂಡಂತೆ ಆರ್ಥಿಕ ಸಹಾಯವನ್ನು ನೀಡಿರುವುದರಿಂದ, ನಷ್ಟದ ಮೊತ್ತವು ಹಿಂದಿನ ಸಾಲುಗಳಿಗೆ ಹೋಲಿಸಿದಲ್ಲಿ ಕಡಿಮೆ ಇರುತ್ತದೆ:
<table>
<tr><th>ಸಂಸ್ಥೆ</th><th>ಆರ್ಥಿಕ ಸಹಾಯದ ಮೊತ್ತ<br>(ರೂ. ಕೋಟಿಗಳಲ್ಲಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>555.00</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>720.00</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>720.00</td></tr>
<tr><td>ಕ.ಕ.ರ.ಸಾ.ನಿಗಮ</td><td>205.00</td></tr>
</table>
</td>
</tr>
<tr>
<td>ಆ.</td>
<td>ಬಿ.ಎಂ.ಟಿ.ಸಿ ಯಲ್ಲಿ 2017-18 ರಲ್ಲಿ ಸಾರಿಗೆ ನೌಕರರಿಗಾಗಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸಲಾಗುವುದು ಎಂದು ನಿಗಮದ ಬೋರ್ಡ್ ನಲ್ಲಿ ತೀರ್ಮಾನ ಮಾಡಿ ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗಿದ್ದು,</td>
<td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2017-18ರಲ್ಲಿ ಸಾರಿಗೆ ನೌಕರರಿಗಾಗಿ ಯಶವಂತಪುರ ಟಿ.ಟಿ.ಎಂ.ಸಿ.ಯಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸುವ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ದಿನಾಂಕ:02/08/2017ರಂದು ಪತ್ರ ಬರೆಯಲಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ದಿನಾಂಕ:30/08/2018ರ ಪತ್ರದಲ್ಲಿ ಯಶವಂತಪುರ ಟಿಟಿಎಂಸಿಯಲ್ಲಿ ಸೂಪರ್ ಸ್ಪೆಷಾಲಿಟಿ</td>
</tr>
</table>

| | | |
|---|---|---|
| | ನಂತರ ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯು ಯಶವಂತಪುರದ ಟಿ.ಟಿ.ಎಂ.ಸಿ ಯಲ್ಲಿ ಆಸ್ಪತ್ರೆ ಸ್ಥಾಪಿಸಲು ಸಹಮತವನ್ನು ವ್ಯಕ್ತಪಡಿಸಿದ್ದು, ಈ ಯೋಜನೆಯು ಯಾವ ಹಂತದಲ್ಲಿದೆ ಮತ್ತು ನೌಕರರಿಗೆ ಅನುಕೂಲವಾಗುವ ಸಲುವಾಗಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ; | ಆಸ್ಪತ್ರೆಯನ್ನು ನಿರ್ಮಿಸಲು ಸೂಕ್ತ ಸ್ಥಳವಾಗಿರುವುದಿಲ್ಲವೆಂದು ತಿಳಿಸಿರುತ್ತದೆ.<br><br>ಪ್ರಸ್ತುತ ಯಶವಂತಪುರ ಟಿಟಿಎಂಸಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸುವ ಕುರಿತು ಪ್ರಸ್ತಾವನೆ ಇರುವುದಿಲ್ಲ. |
| ಇ. | ಬಿ.ಎಂ.ಟಿ.ಸಿ ನಿಗಮದ ಟಿ.ಟಿ.ಎಂ.ಸಿ ಗಳಲ್ಲಿ ಬಾರ್ ಮತ್ತು ಪಬ್ ಗಳನ್ನು ನಡೆಸಲು ಸರ್ಕಾರವು ಅನುಮತಿ ನೀಡುತ್ತಿದೆಯೇ; ಈ ರೀತಿಯ ಪ್ರಸ್ತಾವನೆಗಳನ್ನು ಪರಿಗಣಿಸಲು ಕಾನೂನಿನಲ್ಲಿ ಅವಕಾಶವಿದೆಯೇ; ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚಾಗಿ ಮಕ್ಕಳು, ಮಹಿಳೆಯರು, ಹಿರಿಯ ನಾಗರೀಕರು ಬಂದು ಹೋಗುವ ಬಸ್ ನಿಲ್ದಾಣಗಳಲ್ಲಿ ಬಾರ್/ಪಬ್/ವೈನ್ ಸ್ಟೋರ್ ಪ್ರಾರಂಭಿಸುವುದನ್ನು ನಿರ್ಬಂಧಿಸಲು ಕೈಗೊಂಡ ಕ್ರಮಗಳೇನು? | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿನ ಟಿ.ಟಿ.ಎಂ.ಸಿ.ಗಳಲ್ಲಿ ಬಾರ್ ಮತ್ತು ಪಬ್‌ಗಳನ್ನು ಪ್ರಾರಂಭಿಸಲು ಸಂಸ್ಥೆಯು ಅನುಮತಿ ನೀಡುತ್ತಿರುವುದಿಲ್ಲ.<br><br>ಆದರೆ, ಬಿ.ಟಿ.ಎಂ. ಲೇಔಟ್ ವಿಧಾನ ಸಭಾ ಕ್ಷೇತ್ರದ ಕುವೆಂಪುನಗರ ಬಸ್ ನಿಲ್ದಾಣದಲ್ಲಿ (ಬಿ.ಟಿ.ಎಂ. ಬಸ್ ನಿಲ್ದಾಣ) ಪರವಾನಗಿದಾರರು ಸಂಸ್ಥೆಯ ಅನುಮತಿ ಪಡೆಯದೇ ಬಾರ್ ನಡೆಸಲು ಉಪ ಪರವಾನಗಿದಾರರಿಗೆ ಅವಕಾಶ ಕಲ್ಪಿಸಿದ್ದು, ಸಂಸ್ಥೆಯ ವತಿಯಿಂದ ಅಬಕಾರಿ ಇಲಾಖೆಗೆ ಸದರಿಯವರ ಲೈಸೆನ್ಸ್ ರದ್ದುಪಡಿಸಲು ಪತ್ರ ಬರೆಯಲಾಗಿದೆ. ಅಲ್ಲದೇ ಪರವಾನಗಿದಾರರಿಗೆ ಈ ಸಂಬಂಧ ನೋಟಿಸ್ ನೀಡಿ, ದಿನಾಂಕ:28.11.2023ರಿಂದ ಜಾರಿಗೆ ಬರುವಂತೆ ವಾಣಿಜ್ಯ ಜಾಗಕ್ಕೆ ಸಂಬಂಧಿಸಿದ ಪರವಾನಗಿಯನ್ನು ರದ್ದುಪಡಿಸಲಾಗಿದೆ. ಈ ಸಂಬಂಧ ಪರವಾನಿಗೆದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ನ್ಯಾಯಾಲಯವು "Status quo" ಮುಂದುವರೆಸಲು ಆದೇಶ ನೀಡಿರುತ್ತದೆ.<br><br>ಕುವೆಂಪುನಗರ ಬಸ್ ನಿಲ್ದಾಣ (ಬಿಟಿಎಂ ಬಸ್ ನಿಲ್ದಾಣ) ಹೊರತುಪಡಿಸಿ ಸಂಸ್ಥೆಯ ಇತರೆ ಯಾವುದೇ ಟಿ.ಟಿ.ಎಂ.ಸಿ/ ಬಸ್ ನಿಲ್ದಾಣಗಳಲ್ಲಿ ಬಾರ್ ಮತ್ತು ಪಬ್‌ಗಳನ್ನು ನಡೆಸುತ್ತಿರುವುದಿಲ್ಲ. |

ಸಂಖ್ಯೆ: ಟಿಡಿ 02 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು